ಕೊಡುತ್ತೇವೆಂದು ಬಂದಿರಲಿಲ್ಲ. ಗ್ಯಾನಿಗೂ ಸಹ ಮದುವೆ ಬಗ್ಗೆ ಹುಚ್ಚಿರಲಿಲ್ಲ. ಅವನಿಗೆ ಸಿನಿಮಾಗಳ ಹುಚ್ಚು ಇನ್ನೂ ಬಿಟ್ಟಿರಲೇ ಇಲ್ಲ. ಅದು ಬಿಡದೆ ಮದ್ವೆ ಆಗುವಂತಿಲ್ಲವೆಂದು ಕೆಲವರು ಛೇಡಿಸುತ್ತಿದ್ದರು. ಎತ್ತುಗಳ ವ್ಯಾಪಾರ, ಸಾಟಿ ವ್ಯಾಪಾರ ಮಾಡುತ್ತಾ ಊರಲ್ಲಿ ಕೆಲವು ದಿನ ಇರುತ್ತಿದ್ದ ದಾವಣಗೆರೆ ಬಸ್ಲಿಂಗಣ್ಣನ ಕಣ್ಣಿಗೆ ಗ್ಯಾನಿ ಬಿದ್ದ. ಹಾಗೆ ಕುಂಬಳೂರಲ್ಲಿ ನಿಮ್ಮ ಜಾತಿಯವರು ಇರುವುದಾಗಿ ಹೇಳಿ ಮದ್ವೆ ಮಾಡಿಸುವುದಾಗಿ ಮಾತು ಹಬ್ಬಿಸಿದ.

ದಾವಣಗೆರೆ ಬಸ್ಲಿಂಗಣ್ಣನಿಗೆ ಮದ್ವೆಗಳನ್ನು ಮಾಡಿಸಿ ಮಾಡಿಸಿ ನೀರು ಕುಡಿದಷ್ಟು ಸಲೀಸಾಗಿತ್ತು. ಅವನಿಗೆ ಎತ್ತುಗಳ ವ್ಯಾಪಾರ ಕುದರದಿದ್ದಾಗ ಈ ಗಂಡು–ಹೆಣ್ಣಿನ ಸಂಬಂಧಗಳನ್ನು ಹೊಂದಿಸುತ್ತಿದ್ದ. ಕುಂಬಳೂರಿನವರು ಅವಿಭಕ್ತ ಕುಟುಂಬದವರಾಗಿದ್ದು ಸ್ವಲ್ಪ ಶ್ರೀಮಂತಿಕೆ ಇದ್ದು ಹರಿಹರ, ಮಲೆಬೆನ್ನೂರುಗಳಲ್ಲಿ ಬಟ್ಟೆ ಅಂಗಡಿಗಳನ್ನು ಇಟ್ಟಿದ್ದರು. ಇಂಥವರು ಕೇವಲ ದರ್ಜಿಯಾಗಿದ್ದ ಗ್ಯಾನಿಗೆ ಮಗಳನ್ನು ಕೊಡುವಂತೆ ಮಾಡುವಲ್ಲಿ ಬಸ್ಲಿಂಗಣ್ಣ ಬಹು ಶ್ರಮಿಸಿದ್ದ. ಜೊತೆಗೆ ಗಂಡಿಗೆ ವರದಕ್ಷಿಣೆಯಾಗಿ ಸ್ವಲ್ಪ ದುಡ್ಡನ್ನೂ ಕೊಡಿಸಿದ್ದ. ಗಂಡಿನ ಕಡೆಯವರಾಗಿ ತುಕರಾಮಣ್ಣನ ಜೊತೆ ಎದುರಿನ ಮನೆ ನಿಂಗಣ್ಣ ಮುಂತಾದವರೆಲ್ಲಾ ಹೋಗಿ ಹೆಣ್ಣಿನವರೊಂದಿಗೆ ನಿಶ್ಚಯಿಸಿಕೊಂಡು ಬಂದರು. ಗ್ಯಾನಿಗೆ ಮದ್ವೆಯಂತೆ, ಮದ್ವೆಯಂತೆ ಎಂದು ಊರಲ್ಲೆಲ್ಲಾ ಮಾತುಗಳು ಹಬ್ಬಿದವು. ಗ್ಯಾನಿಗೆ ಕ್ಲಾತ್ ಸ್ಟೋರ್ಸ್‌ಗಳಿರುವ ಮಾವ ಸಿಕ್ಕನಲ್ಲಾ ಎಂದು ಖುಷಿಯಾಗಿ ಹುಡುಗಿ ನೋಡಲು ಕೆಂಚನೊಟ್ಟಿಗೆ ಹೋದ. ಹುಡುಗಿ ಗ್ಯಾನಿಯ ಪಕ್ಕದಲ್ಲಿ ನಿಲ್ಲಿಸಿದರೆ ಗ್ಯಾನಿಗಿಂತ ಒಂದಡಿ ಹೆಚ್ಚು ಎತ್ತರವಿದ್ದಳು. ಎತ್ತರವಷ್ಟೇ ಅಲ್ಲ ಬೆಳ್ಳನೆಯ ಬೆಳದಿಂಗಳ ಬಣ್ಣ, ನೀಳನಾಸಿಕ, ಸ್ವಚ್ಛ ಕಣ್ಣುಗಳಿಂದ ಬಹು ಸ್ಫುರದ್ರೂಪಿಯಾಗಿದ್ದಳು. ಗ್ಯಾನಿ ತನ್ನ ಹೆಂಡತಿಯಾಗುವವಳು ಇಷ್ಟೊಂದು ಚೆನ್ನಾಗಿರಲು ಸಾಧ್ಯವಿಲ್ಲ ಅಂದುಕೊಳ್ಳುವಷ್ಟು ಅವಳು ಸುಂದರವಾಗಿದ್ದಳು. ಅಳಿಯನಾಗುವ ಗ್ಯಾನಿಯನ್ನು ಮಾವಂದಿರುಗಳು, ಭಾವಮೈದುನರುಗಳು ಬಹು ಕಾಳಜಿಯಿಂದ ನೋಡಿಕೊಂಡಿದ್ದಲ್ಲದೆ ಸ್ವಲ್ಪ ಬಟ್ಟೆ ಬರೆ, ಕೈಯಲ್ಲಿ ಕಾಸನ್ನೂ ಕೊಟ್ಟರು.

ತುಕರಾಮಣ್ಣ ತುಳಜಕ್ಕರ ಹಟದಂತೆ ಊರಿನಲ್ಲಿ ಮನೆಮುಂದೆಯೇ ಧಾರೆಮುಹೂರ್ತ ನಡೆಯುವುದೆಂದು ತೀರ್ಮಾನವಾಯ್ತು. ಗ್ಯಾನಿಯಂತೂ ಈಗ ಊರಿನಲ್ಲಿ ಸದಾ ಪ್ಯಾಂಟ್ ಹಾಗೂ ಚೂಪನೆಯ ಬೂಡ್ಸುಗಳಿಲ್ಲದೆ ಓಡಾಡುತ್ತಿರಲಿಲ್ಲ. ಯಾವಾಗಲೂ ಪೈಜಾಮ, ಪಂಚೆಯಲ್ಲಿರುತ್ತಿದ್ದ ತೆಳ್ಳನೆಯ ತೊಡರುಗಾಲಿನ ಅಷ್ಟೇನೂ ಚೆನ್ನಾಗಿರದ ಗ್ಯಾನಿ ಒಮ್ಮೆಲೆ ಸಿನಿಮಾ ಹೀರೋ ತರಹ ಬಣ್ಣ ಬದಲಾಯಿಸತೊಡಗಿದ್ದ. ಅಂತೂ ಇಂತೂ ಮದ್ವೆಯ ದಿನ ಬಂದೇಬಿಟ್ಟಿತು. ಮದುವೆ ದಿನ ಊರವರಿಗೆ ಅಷ್ಟೇನೂ ಹೊಸದಾಗಿ ಕಾಣಲಿಲ್ಲ. ಏಕೆಂದರೆ ನಾಲ್ಕುದಿನ ಮುಂಚಿತವಾಗಿಯೇ ಮೈಕಿನ ಹಾವಳಿ, ಬೀಗರುಗಳ ಸತತ ಆಗಮನದಿಂದ ನಿರ್ದಿಷ್ಟ ದಿನ ಬರುವುದರೊಳಗೆ ಊರವರ ಕುತೂಹಲ ಇಳಿಯತೊಡಗಿತ್ತು. ಹೆಂಡತಿ ಕಡೆಯವರು ಭಾರಿ ಕಳ್ಳುಬಳ್ಳಿಗರಾದ್ದರಿಂದ ಊರಿಗೆ ಬರುವ ಬಸ್ಸುಗಳೆಲ್ಲವೂ ಜನರನ್ನು ತಂದು ತಂದು ಎಸೆಯುತ್ತಿದ್ದವು. ಆ ಜನರೆಲ್ಲರೂ ಸಾಮಾನ್ಯವಾಗಿ ಪಟ್ಟಣದವರೇ ಆದ್ದರಿಂದ ಭಾರಿ ವೇಗವಾಗಿ ನಡೆದಾಡುವವರಾಗಿರುತ್ತಿದ್ದರು. ಜೊತೆಗೆ ಅವರದೇ ಮರಾಠಿ ಭಾಷೆ ಮಾತಾಡುತ್ತಿದ್ದರಿಂದ ಊರವರಿಗೆ ಅರ್ಥವಾಗದೆ 'ಇವರೇನಪ್ಪ ಕಸರೆ–ಪಿಸರೆ ಅಂತ ಭರ್ದಂಡು ಕಡ್ಕಂಡು ಬೀಳಂಗೆ ಓಡಾಡ್ತಾರೆ' ಅನ್ನುವಂತೆ ಆಶ್ಚರ್ಯವಾಗಿತ್ತು.

ಹೆಂಡತಿ ಕಡೆಯವರು ಪಂಡರಾಪುರದ ಪಕ್ಕಾ ಅನುಯಾಯಿಗಳಾದ್ದರಿಂದ ಗಂಡು